ಶ್ರೀ ಎ. ಮುನಿಯಪ್ಪ.—ಅಮರ್ಥ್ಯರರು ಸ್ಕೆಟು ಪ್ಲಾನ್ ಮಾಡಿ ಮುನಿಸಿಪಾಲಟಿಗೆ ಒಂದು ವರ್ಷಕ್ಕಿಂತ ಮುಂಚಿತವಾಗಿ ಕಳುಹಿಸಿದರೂ ಸಹ ಇಲ್ಲಯವರೆಗೂ ಅದು ಮುನಿಸಿಪಾಲಟಿಯಲ್ಲೇ ಇರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಸ್ಕೆಟ್ ಪ್ಲಾನನ್ನು ಅನುಮೋದಿಸುವಾಗ ಸ್ವಲ್ಪ ನಿಧಾನವಾಗಿದೆ. 15-12-1953ರಲ್ಲಿ ಮುನಿಸಿಪಾಲಟಿ ಸ್ಕೆಟ್ ಪ್ಲಾನ್ ತಯಾರಿಸಿ ಅಮರ್ಥ್ಯರರಿಗೆ ಕಳುಹಿಸಿದ್ದಾರೆ.

ಶ್ರೀ ಎ. ಮುನಿಯಪ್ಪ.—ಮುನಿಸಿಪಲ್ ಪ್ರೆಸಿಡೆಂಟರು ಈ ವಿಚಾರದಲ್ಲಿ ಬಹಳ ನಿಧಾನಮಾಡುತ್ತಾ ಇರುವುದು ಗೊತ್ತೆ ?

ಶ್ರೀ ಟಿ. ಚನ್ನಯ್ಯ.—ಆ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ತಿಳಿಯದಿದ್ದರೆ ಅವರಿಗೆ ಬರೆದು ತಿಳಿದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ವಿಚಾರಿಸುತ್ತೇವೆ.

ಶ್ರೀ ಎ. ಮುನಿಯಪ್ಪ.—ನಮ್ಮಾರು 300 ಮನೆಗಳವರು ಒಂದೊಂದು ಮನೆಯಲ್ಲಿ 3-4 ಸಂಸಾರ ವಿದ್ದೂ ಬಹಳ ತೊಂದರೆಪಡುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎ. ಮುನಿಯಪ್ಪ.—ಸ್ವಲ್ಪ ಎಚ್ಚರ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆಗಲಿ.

ಶ್ರೀ ಎ. ಮುನಿಯಪ್ಪ.—ಆದಷ್ಟು ಜಾಗ್ರತೆಯಾಗಿ ಯಾದರೂ ಈ ಕೆಲಸ ಮಾಡಿಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ಅಕ್ಕೆ ತೆಗೆದುಕೊಳ್ಳುವಂತೆ ಮಾಡಿ ವಶಕ್ಕೆ ಕೊಡಲು ಏರ್ಪಾಡು ಮಾಡುತ್ತೇವೆ.

Buildings for Depressed Class High and Middle School Hostels.

Q.—51. **Sri T. HANUMIAH** (Hiriyur-Scheduled Castes).—

Will the Government be pleased to state :—

(*a*) how many buildings are constructed for the Depressed Class High and Middle School Hostels in the State—District and Talukwar information may be furnished with the names of Hostels, cost of construction and the years in which constructed ;

(*b*) out of the above buildings how many are at Government cost and how many are on grant-in-aid basis—District and Talukwar ?

A.—**Sri A. G. RAMACHANDRA RAO** (Minister for Law and Education).—

(*a*) and (*b*) Statement appended.

Sl. No.	Name of the Hostel (with locality)	Cost of construction	Year in which the building was constructed	Remarks [showing whether the (i) building was put up at Government cost; or (ii) building put up on grant-in-aid basis]
	Bangalore City District, Bangalore.	Rs.		
1	Adijambava Hostel, Bangalore City	10,000	1934–35	This building was constructed on a grant-in-aid basis.
	Shimoga District.			
2	Depressed Class Boarding Home, Shimoga ...	64,379	1952	This building was constructed at Government cost.
	Chitaldrug District.			
3	Bovi Boys' Hostel, Davangere, Davangere Taluk ...	12,700 (estimated cost)	1951	Constructed on grant-in-aid basis.
4	Adikarnataka Hostel do do ...	3,990 ,,	1950	Do do
5	Cheluvadi Hostel do do ...	13,000 ,,	1951	Do do
	Kolar District.			
6	Aided Gandhi Harijan Hostel, Bangarpet, Bangarpet Taluk.	9,216	...	Constructed on grant-in-aid basis.
	Chickmagalur District.			
	Nil.			
	Bangalore Civil Station, Bangalore.			
7	Sri R. Gopalaswamy Iyer's Harijan Vidyarthi Nilaya, Srirampuram.	76,500 (estimated cost)	...	Being constructed on grant-in-aid basis
	Hassan District.			
8	Adikarnataka Boarding Home, Hassan ...	30,000	1927–29	This Hostel is being constructed at Government cost.
	Mysore District.			
9	D. C. Hostel for Boys, Nazarabad, Mysore ...	41,018	...	Constructed at Government cost.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ಬೆಂಗಳೂರು ಆದಿಕರ್ಣಾಟಕ ಹಾಸ್ಟೆಲ್ ಮತ್ತು ಬೋರ್ಡಿಂಗ್ ಹೋಮಿಗೆ ಸರ್ಕಾರದ ಗ್ರಾಂಟೆಷ್ಟು ? ಸಹಾಯ ದ್ರವ್ಯವೆಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾನೂನು ಪ್ರಕಾರ ಕೊಟ್ಟಿದೆ. ಪ್ರಾಯಶಃ ಸೇಕಡ 50 ಭಾಗ ಸರ್ಕಾರ, ಸೇಕಡ 50 ಭಾಗ ಸಾರ್ವಜನಿಕರು ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—ಪರಿಶಿಷ್ಟದಲ್ಲಿ ನಮೂದಿಸಿರುವ 7ನೆಯ ನಂಬರಿನ ಶ್ರೀ ಆರ್. ಗೋಪಾಲಸ್ವಾಮಿ ಐಯ್ಯಂಗಾರ್ಯರ ಹರಿಜನರ ವಿದ್ಯಾರ್ಥಿನಿಲಯವನ್ನು ಯಾವ ವರ್ಷದಲ್ಲಿ ಕಟ್ಟಲು ಅಂದಾಜಾಗಿತ್ತು ?

Sri A. G. RAMACHANDRA RAO.—Notice.

ಶ್ರೀ ಟಿ. ಹನುಮಯ್ಯ.—ಪರಿಶಿಷ್ಟದಲ್ಲಿ ಕೊಟ್ಟಿರುವ ಹಾಸ್ಟೆಲುಗಳ ಕಟ್ಟಡಗಳಲ್ಲದೆ ಬೇರೆ ಹಾಸ್ಟೆಲು ಕಟ್ಟಡಗಳು ಇತರ ಕಡೆಗಳಲ್ಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಅಧ್ಯಕ್ಷರು.—ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಇಲ್ಲವೆಂದು ಅರ್ಥವಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಕೋಲಾರದಲ್ಲಿ ಹಾಸ್ಟೆಲು ಕಟ್ಟಡವಾಗುತ್ತಿರುವುದು ಸರ್ಕಾರಕ್ಕೆ ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂಗಾರ ಪೇಟೆಯಲ್ಲೊಂದಿದೆ. ಅದಕ್ಕೆ 9,216 ರೂಪಾಯಿಗಳು ಖರ್ಚಾಗಿದೆ.

ಶ್ರೀ ಟಿ. ಹನುಮಯ್ಯ.—ಅದಲ್ಲದೆ ಎಷ್ಟು ಕಟ್ಟಡಗಳು ಆಗುತ್ತಿವೆಯೆಂದು ನಾನು ಕೇಳುವುದು.

ಶ್ರೀ ಎ. ಜಿ. ರಾಮಚಂದ್ರರಾವ್.—ತಮಗೆ ಉತ್ತರ ಕೊಟ್ಟಮೇಲೆ ಆಗಿರಬೇಕು, ವಿಚಾರಿಸುತ್ತೇನೆ.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಜಿಲ್ಲೆಯಲ್ಲಿ ಯಾವುದೂ ಸರ್ಕಾರಿ ಬೋರ್ಡಿಂಗ್ ಹೋಂ ಕಟ್ಟಡ ವಿಲ್ಲದಿರುವುದು ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಹಾಯ ದ್ರವ್ಯದ ಆಧಾರದಮೇಲೆ ಕಟ್ಟಿರುವ 3 ವಿದ್ಯಾರ್ಥಿ ನಿಲಯಗಳು ಆ ಜಿಲ್ಲೆಯ ದಾವಣಗೆರೆ ತಾಲ್ಲೂಕಿನಲ್ಲಿವೆ.

ಶ್ರೀ ಟಿ. ಹನುಮಯ್ಯ.—ಸಹಾಯ ದ್ರವ್ಯದಿಂದ ಕಟ್ಟಿರುವ ಕಟ್ಟಡ ನಾನು ಕೇಳುತ್ತಿಲ್ಲ. ಸರ್ಕಾರದಿಂದ ನೇರವಾಗಿ ಕಟ್ಟಿರುವುದು ಚಿತ್ರದುರ್ಗ ಜಿಲ್ಲೆಯಲ್ಲಿಲ್ಲವೆ ?

Sri A. G. RAMACHANDRA RAO.—It is an obvious thing.

ಶ್ರೀ ಟಿ. ಹನುಮಯ್ಯ.—ಮುಂದಾದರೂ ಸಹ ಕಟ್ಟಿಸಲು ಸರ್ಕಾರದವರು ಸಹಾಯ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾದ ಮಟ್ಟಿಗೆ ಸಹಾಯ ದ್ರವ್ಯದ ಆಧಾರದಮೇಲೆ ಕಟ್ಟಿಸುವುದು ಸೂಕ್ತವೆಂದು ಕಾಣುತ್ತದೆ.

ಶ್ರೀ ಟಿ. ಹನುಮಯ್ಯ.—ಇತರ ಕಡೆಗೆ ಕೊಟ್ಟಿರುವ ಹಾಗೆ ಚಿತ್ರದುರ್ಗಕ್ಕೂ ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ತುಮಕೂರು ಜಿಲ್ಲೆಯಲ್ಲಿ 2 ಕಡೆ ಹಾಸ್ಟಲುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅವು ಬಾಡಿಗೆ ಕಟ್ಟಡದಲ್ಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಅವಕ್ಕೆ ಕಟ್ಟಡ ಕಟ್ಟಿಸಿ ಕೊಡಬೇಕೆಂದು ಸರ್ಕಾರದವರು ಯೋಜನೆ ಹಾಕಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಜನೆ ಏನೂ ಹಾಕಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಅದಕ್ಕಾಗಿ ಮನವಿ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೆರಡು ಬಂದಿರುವಂತೆ ಜ್ಞಾಪಕವಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ಸರ್ಕಾರದಿಂದ ಕಟ್ಟಿಸಿಕೊಡುವುದಕ್ಕೆ ಯೋಚನೆ ಮಾಡುತ್ತಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸದ್ಯದಲ್ಲಿ ಏನೂ ಯೋಚನೆ ಮಾಡುತ್ತಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ತುಮಕೂರಿನಲ್ಲಿ ಸರ್ಕಾರದವರು ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲ್ ಅಂದಾಜು ಮಾಡಿ ಟೆಂಡರ್ ಕಾರ್ ಫಾರ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿ ಒಂದು ಕಟ್ಟಡ ಕಟ್ಟುವುದಕ್ಕೆ ಹಣ ಮಂಜೂರು ಮಾಡುವುದನ್ನು ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಯಾವ ತರಹದ ಹಾಸ್ಟಲೂ ಇಲ್ಲದಿರುವುದರಿಂದ ಅದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಈ 9 ಐಟಂಗಳಲ್ಲಿ ಯಾವ ಹಾಸ್ಟಲಿಗೆ ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೋರೇಷನ್ ಫಂಡಿನಿಂದ ಗ್ರಾಂಟನ್ನು ಮಂಜೂರು ಮಾಡಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ರಾಚಯ್ಯ.—ಶ್ರೀ ಆರ್. ಗೋಪಾಲಸ್ವಾಮಿ ಐಯ್ಯಂಗಾರ್ಯರ ಹರಿಜನರ ವಿದ್ಯಾರ್ಥಿನಿಲಯಕ್ಕೆ 76,500 ರೂಪಾಯಿಗಳ ಎಸ್ಟಿಮೇಟಿದೆ. ಆ ಹಣವನ್ನು ಅಮಿಲಿಯೋರೇಷನ್ ಫಂಡಿನಿಂದ ಕೊಟ್ಟಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ಹೇಳಲು ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಈಗ ಅಮಿಲಿಯೊರೇಷನ್ ಫಂಡಿನಿಂದ 2 ಲಕ್ಷ ರೂಪಾಯಿಗಳನ್ನು ಹಾಸ್ಟಲು ಕಟ್ಟಡ ಕಟ್ಟಿಸಲು ತೆಗೆದಿಡಬೇಕೆಂದು ತೀರ್ಮಾನವಾಗಿದೆ. ಆ ಫಂಡಿನಿಂದ ಈಗ ಕಟ್ಟಿರುವ ಹಾಸ್ಟಲು ಯಾವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡಬೇಕು.

ಶ್ರೀ ಬಿ. ರಾಚಯ್ಯ.—9 ನೆಯ ಐಟಂನಲ್ಲಿ ನಮೂದಿಸಿರುವ ನಿಮ್ಮ ತರಗತಿಗಳವರ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡವನ್ನು 1915 ರಲ್ಲಿ ಕಟ್ಟಿದೆ. ಇತ್ತೀಚೆಗೆ 20 ವಿದ್ಯಾರ್ಥಿಗಳು ಹೆಚ್ಚಾಗಿ ಬಂದಿರುವುದರಿಂದ ಇನ್ನೂ ಹೆಚ್ಚು ವಾರ್ಡುಗಳನ್ನು ಕಟ್ಟಬೇಕೆಂದು ಶಿಪಾರ್ಸು ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಬಿ. ರಾಚಯ್ಯ.—ಈಗ ಜಾಗ್ರತೆ ಆ ಕೆಲಸವನ್ನು ಮಾಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲಿಸುತ್ತೇವೆ.

ಶ್ರೀ ಎ. ಮುನಿಯಪ್ಪ.—ಕೋಲಾರದಲ್ಲಿ ಹಾಸ್ಟಲು ಕಟ್ಟುವ ಸ್ಥಳ ಚೆನ್ನಾಗಿಲ್ಲವೆಂದು ಹೇಳುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಸಂಬಂಧವಾದ ಪ್ರಶ್ನೆ ಹೋದ ವಾರ ಚರ್ಚೆಯಾಗಿದೆ.

9 A.M.

ಶ್ರೀ ಆರ್. ಚನ್ನಿಗರಾಮಯ್ಯ.—ಈಗ ಕೊಟ್ಟಿರ ತಕ್ಕ ಗ್ರಾಂಟುಗಳೆಲ್ಲಾ ವಿದ್ಯಾ ಇಲಾಖೆಯ ಮೂಲಕ allotment ಆಗಿ ಆ ಮೂಲಕ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಹಾಗೆಯೇ ತಿಳಿದಿದ್ದೇನೆ.

ಶ್ರೀ ಆರ್. ಚನ್ನಿಗರಾಮಯ್ಯ.—ಈಗ ಹೊಸದಾಗಿ ಕೋಲಾರ, ಮೈಸೂರು ಮತ್ತು ತುಮಕೂರು ಡಿಸ್ಟ್ರಿಕ್ಟ್‌ಗಳಿಗೆ ಹಾಸ್ಟೆಲ್ ಕಟ್ಟಿಸಲು ಮಂಜೂರಾಗಿರುವ 1,86,000 ರೂಪಾಯಿಗಳನ್ನು ಡಿಪ್ರೆಸ್ಡ್ ಕ್ಲಾಸ್ ಗ್ರಾಂಟಿನಿಂದ ಕೊಡುವುದು ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಪಾಲಿಸಿ ಸಮಿತಿಯವರು ಶಿಫಾರ್ಸು ಮಾಡಿರುತ್ತಾರೆ.

ಶ್ರೀ ಆರ್. ಚನ್ನಿಗರಾಮಯ್ಯ.—ಹಾಗೆಮಾಡಿಲ್ಲ ವೆಂಬುದು ಗೊತ್ತಿದಿಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡಿದ್ದಾರೆಂದು ತಿಳಿದು ಬಂದಿದೆ.

Government High School for Boys at Channapatna (Accommodation).

Q.—777. Sri V. VENKATAPPA (Channapatna).—

Will the Government be pleased to state:—

(*a*) the total number of students studying in the Government High School for Boys, Channapatna, for the last five years and the percentage of increase in the strength of the School from what it was in the early years of its establishment;

(*b*) whether they are aware that the present High School for Boys' building was constructed more than 50 years ago when the number of students for all the classes in the institution was between seventy and eighty;

(*c*) whether they have not received representations from time to time about the utter lack of accommodation in the present building for the very large number of students therein;

(*d*) if so, what action they propose to take to relieve congestion?

A.—Sri A. G. RAMACHANDRA RAO (Minister for Law and Education).—

(*a*) Number of students studying in the Government Boys' High School, Channapatna:—

Year		*Students*
1949-50	...	669
1950-51	...	722
1951-52	...	694
1952-53	...	649
1953-54	...	684

The strength in 1899 and in 1954 and the percentage of increase in 1954 are as follows:—

Year	*Strength*	*Percentage of increase*
1899	Less than 100	...
1954	684	584%

(*b*) Yes.

(*c*) and (*d*) Yes. Plan and estimate have been called for from the Public Works Department for providing additional accommodation.

ಶ್ರೀ ವಿ. ವೆಂಕಟಪ್ಪ.—ಈ ಹುಡುಗರಿಗೆ accommodation ಮಾಡಿಕೊಡಲು ಏನು ಕಾರ್ಯಕ್ರಮ ಕೈಗೊಂಡಿದೆ?

Sri A. G. RAMACHANDRA RAO.—Plans and estimates have been called for.

ಶ್ರೀ ವಿ. ವೆಂಕಟಪ್ಪ.—ಎಷ್ಟಕ್ಕೆ accommodation ಮಾಡಬೇಕೆಂದಿದೆ?

Sri A. G. RAMACHANDRA RAO.—Adequate to the number of students there with provision for prospective development also.

ಶ್ರೀ ವಿ. ವೆಂಕಟಪ್ಪ.—ಈ plans and estimates call for ಮಾಡಿ ಎಷ್ಟು ದಿನವಾಯಿತು?

Sri A. G. RAMACHANDRA RAO.—About October and November of last year.

ಶ್ರೀ ವಿ. ವೆಂಕಟಪ್ಪ.—ಈಗ ಒಂದು ತಿಂಗಳ ಕೆಳಗೆ ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಆ ಊರಿನವರು ಈ ಬಗ್ಗೆ ಅವರಲ್ಲಿ ಅಹವಾಲು ಹೇಳಿಕೊಂಡಾಗ ಅವರು ಡಿಪಾರ್ಟ್‌ಮೆಂಟಿನವರು ಅಂದಾಜು ತಯಾರು ಮಾಡಿರುವುದಾಗಿ ತಿಳಿಸಿದರೆಂದು ಗೊತ್ತಾಗಿದೆ. ಹಾಗಿದ್ದರೆ ಈ ಅಂದಾಜಿಗಾಗಿ ನವೆಂಬರ್ ತಿಂಗಳಲ್ಲಿ ಬರೆದಿದೆಯೇ!

Sri A. G. RAMACHANDRA RAO.—My information is that the letter has gone.